*

**ಓಎಸ್ ನಂ: 41/2018**
**ಡಿಡಬ್ಲೂ: 2**

**<u>ಸಾಕ್ಷಿಗೆ ದಿನಾಂಕ 28-03-2026 ರಂದು ಕರೆಯಿಸಿ ಪ್ರಮಾಣ ವಚನ  ಬೋಧಿಸಲಾಯಿತು</u>**

<u>ಮುಂದುವರಿದ ಪಾಟೀ ಸವಾಲು: ವಾದಿ ಪರ ಶ್ರೀಮತಿ ಎಮ್.ವಿ.ಎಲ್.  ವಕೀಲರಿಂದ</u>

ನಾವು KEC International Limited Companyಯವರಿಗೆ ರೈಲ್ವೇ ಸೈಡಿಂಗ್ ಕೆಲಸಕ್ಕೆ Contract ಕೊಟ್ಟಿದ್ದು ಅವರು SRC Companyಯವರಿಗೆ Sub-Contract ಕೊಟ್ಟಿದ್ದರು ಎಂದು ನಿಮ್ಮ ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ್ದೀರಿ, ಸದರಿ Contractನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಪಡಿಸಿದ್ದೇವೆ ಎಂದು ನುಡಿಯುತ್ತಾರೆ. ಸದರಿ Contract ಪ್ರಕಾರ ಕೆಲಸ ಮಾಡಲು SRC Companyಯವರು ವಾದಿಯ ಜಾಗದ ಮೇಲೆ ತಮ್ಮ ಮಷಿನರಿಗಳನ್ನು ನಿಲ್ಲಿಸಿ ಕೆಲಸ ಮಾಡಿರುತ್ತಾರೆ. SRC Companyಯವರು Contract ಪ್ರಕಾರ ಕೆಲಸವನ್ನು ಎಷ್ಟು ದಿನಗಳಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಮಷಿನರಿಗಳನ್ನು ನಿಲ್ಲಿಸಿ ಕೆಲಸ ಮಾಡಿದ ಕಾರಣ SRC Companyಯವರು ವಾದಿಗೆ ರೂ.1,50,000/- ಹಣವನ್ನು ಲೀಸ್ ಹಣವಾಗಿ ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿ ಜಾಗವನ್ನು ಉಪಯೋಗಿಸಿದ ಕಾರಣ settlement ಹಣವಾಗಿ ರೂ.1,50,000/- ನೀಡಲಾಗಿದೆ ಎಂದು ನುಡಿಯುತ್ತಾರೆ. SRC Companyಯವರು ಕೆಲಸ ಆದ ನಂತರ ತಮ್ಮ ಮಷಿನರಿಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂದರೆ ಸರಿ.

ವಾದಿ ಈ ದಾವೆಯನ್ನು ನಿಮ್ಮ ಕಂಪನಿಯಿಂದ ಧೂಳು ಬಂದು ಆತನ ಜಾಗದಲ್ಲಿರುವ ಬೆಳೆ ಹಾನಿಯಾದ ಕಾರಣ ಸಲ್ಲಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. SRC Companyಯವರು ತಮ್ಮ ಮಷಿನರಿಗಳನ್ನು ವಾದಿಯ ಜಾಗದಲ್ಲಿ ಹಾಕಿ ಕೆಲಸ ಮಾಡಲು ನೀಡಿದ ಹಣ ಮತ್ತು ಈ ದಾವೆಯಲ್ಲಿ ವಾದಿ ಕೇಳುತ್ತಿರುವ ಹಾನಿಯ ಹಣ ಬೇರೆ ಬೇರೆ ಹಣ ಎಂದರೆ ಸಾಕ್ಷಿ ವಾದಿ ಕೇಳುತ್ತಿರುವ ಪರಿಹಾರವು SRC Companyಯವರು ತಮ್ಮ ಮಷಿನರಿಗಳನ್ನು ವಾದಿಯ ಜಾಗದಲ್ಲಿ ಹಾಕಿ ಕೆಲಸ ಮಾಡಿದ ಸಮಯದಲ್ಲಿ ಕೇಳುತ್ತಿದ್ದಾರೆಂದು ನುಡಿಯುತ್ತಾರೆ.

ದಿಃ 19.06.2018ರಂದು ತಹಶೀಲ್ದಾರ್ ಚಿತ್ತಾಪುರ್ ರವರು ನಿಮಗೆ ನೀಡಿದ ಪತ್ರವು ನಿಮ್ಮ ಕಂಪನಿಯಿಂದ ಬರುವ ಧೂಳಿನಿಂದ ಬೆಳೆ ಹಾನಿ ಆದ ಬಗ್ಗೆ ನೀಡಿದ್ದಾರೆಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಪತ್ರಕ್ಕೆ ನಾವು ಸೂಕ್ತ ಉತ್ತರ ನೀಡಿದ್ದೇವೆ ಎಂದು ನುಡಿಯುತ್ತಾರೆ. ನೀವು ಯಾವುದೇ ಉತ್ತರ ನೀಡಿಲ್ಲ, ನೀವು ನ್ಯಾಯಾಲಯದಲ್ಲಿ ಸಲ್ಲಿಸಿರುವ ನಿಡಿ-2 ದಾಖಲೆಯ ಮೇಲೆ ಯಾವುದೇ inward ಅಥವಾ outward number ಇಲ್ಲ ಆದ ಕಾರಣ ಅದು ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ಪ್ರತಿವಾದಿ ಕಂಪನಿಯವರು ತಮ್ಮ Factory ಯಲ್ಲಿ ಸರಿಯಾದ ಮಷಿನರಿಗಳನ್ನು ಇಟ್ಟಿಲ್ಲ ಆದ ಕಾರಣ ಕಂಪನಿಯ ಅಕ್ಕಪಕ್ಕದ ಹೊಲಗಳಲ್ಲಿ ಸಿಮೆಂಟಿನ ಧೂಳು ಬಂದು ಬೆಳೆ ಹಾನಿಯಾಗುತ್ತಿದೆ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರು ಇದರ ಕುರಿತು ಪಂಚನಾಮೆ ಮಾಡಿ ನಿಮ್ಮ ಕಂಪನಿಯಲ್ಲಿ pollution ಆಗುತ್ತಿದೆ ಎಂದು ವರದಿ ನೀಡಿ ನಿಮ್ಮ ಕಂಪನಿಯವರು ವಾದಿಯರಿಗೆ ರೂ.1,50,000/- ಹಣವನ್ನು ಪರಿಹಾರವಾಗಿ ನೀಡಬೇಕೆಂದು ಆದೇಶ ನೀಡಿದ್ದರು ಎಂದರೆ ಸರಿಯಲ್ಲ. ನೀವು ಪರಿಹಾರದ ಹಣ ನೀಡದೆ SRC Companyಯವರು ಹಣ ನೀಡಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಎಲ್ಲ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.